CC No. 1157/10
PW-6

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 12.09.2024**

**ಮುಂದುವರಿದ ಪಾಟೀ ಸವಾಲುಃ ಶ್ರೀ ಹೆಚ್ ಇ ಪಿ ವಕೀಲರಿಂದ**

ನಾನು **2001** ರಿಂದ **2006** ರವರೆಗೆ ಶಾಲೆ ಹಾಗೂ ವಸತಿ ನಿಲಯದ ಆಡಳಿತ ಮೇಲ್ವಿಚಾರಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದೇನೆ. ಕಟ್ಟಡ ಕಾಮಗಾರಿಯನ್ನು ಖುದ್ದು ಧರ್ಮದರ್ಶಿಗಳು ಮಾಡಿರುವುದೇ ಅಥವಾ ಖಾಸಾಗಿ ವ್ಯಕ್ತಿಗಳಿಗೆ ವಹಿಸಿರುವುದೇ ಎಂದು ನನಗೆ ಗೊತ್ತಿಲ್ಲ. ಡಿಸೆಂಬರ್ **2006** ರಲ್ಲಿ ಕಟ್ಟಡ ಕಾಮಗಾರಿ ಪೂರ್ಣಗೊಂಡಿರಲಿಲ್ಲ. ನಿಪಿ **4** ರ ನಿಯಮಾವಳಿ ಪ್ರಕಾರ ನಡಾವಳಿ ಪುಸ್ತಕ, ಕಚೇರಿಯ ಎಲ್ಲಾ ಕಡತಗಳು , ಲೆಕ್ಕ ಪತ್ರಗಳು, ರಶೀದಿಗಳು ಮತ್ತು ಓಚರ್ ಗಳು ಕಾರ್ಯದರ್ಶಿಗಳ ಸುಪರ್ದಿಯಲ್ಲಿ ಇರಬೇಕು ಎಂಬ ನಿಯಮ ಇದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಆದರೆ ಅದು ಅಧ್ಯಕ್ಷರ ಸುಪರ್ದಿಯಲ್ಲಿಯೇ ಇತ್ತು ಎನ್ನುವರು. ಅದೇ ರೀತಿ ವಾರ್ಷಿಕ ಲೆಕ್ಕ ಪರಿಶೋಧನೆಯ ವೇಳೆ ಮೇಲೆ ಹೇಳಿದ ಎಲ್ಲಾ ದಾಖಲೆಗಳನ್ನು ಖಜಾಂಚಿಯವರಿಗೆ ನೀಡಬೇಕು ಎಂಬ ನಿಯಮ ಇದೆ ಎಂದರೆ ಸರಿ . **2001** ರಿಂದ **2006** ರವರೆಗೆ ಶಾಲಾ ಹಾಗೂ ವಸತಿ ನಿಲಯಕ್ಕೆ ಸಂಬಂಧಿಸಿದಂತೆ ಶುಲ್ಕವನ್ನು ಆಡಳಿತ ಮಂಡಳಿಯ ಲೆಕ್ಕಿಗರ ಬಳಿ ಜಮೆ ಮಾಡಲಾಗುತ್ತಿತ್ತು ಎಂದರೆ ಸರಿ. **2001** ರಿಂದ **2003** ರವರೆಗೆ ಹೆಚ್ಚು ವಿದ್ಯಾರ್ಥಿಗಳು ದಾಖಲಾಗದ ಕಾರಣ ಧರ್ಮದರ್ಶಿಗಳು ನೀಡಿದ ದೇಣಿಗೆ ಹಾಗೂ ಬ್ಯಾಂಕಿನಿಂದ ಪಡೆದ ಸಾಲವೇ ನಮ್ಮ ಟ್ರಸ್ಟನ ಆದಾಯ ಆಗಿತ್ತು ಎಂದರೆ ಸರಿ. ನನಗೆ ಶೈಕ್ಷಣಿಕವಾಗಿ ಹಾಗೂ ವಸತಿ ನಿಲಯದ ಮೇಲ್ವಿಚಾರಣೆಯನ್ನು ಹೊರತು ಪಡಿಸಿ ಹಣಕಾಸಿನ ವ್ಯವಹಾರದ ಯಾವುದೇ ಜವಾಬ್ದಾರಿಗಳು ನನಗೆ ಇರಲಿಲ್ಲ ಅದನ್ನು ಅಧ್ಯಕ್ಷರು ಹಾಗೂ ಇತರೆ ಧರ್ಮದರ್ಶಿಗಳು ನೋಡಿಕೊಳ್ಳುತ್ತಿದ್ದರು. ಹಣಕಾಸಿನ ವ್ಯವಹಾರಗಳನ್ನು ಮೂರು ಜನ ಆರೋಪಿಗಳೇ ನೋಡಿಕೊಳ್ಳುತ್ತಿದ್ದರು .

ನಿಪಿ **4** ರ ಪ್ರಕಾರ **2** ಮತ್ತು **3** ನೇ ಆರೋಪಿಗಳಿಗೆ ಧರ್ಮದರ್ಶಿ ಯನ್ನು ಹೊರತು ಪಡಿಸಿ ಪ್ರತ್ಯೇಕವಾದ ಯಾವುದೇ ಸ್ಥಾನ ಅಥವಾ ಜವಾಬ್ದಾರಿ ಇಲ್ಲ ಎಂದರೆ ಸರಿ. ನಿಪಿ **9** ಮತ್ತು **10** ರಲ್ಲಿಯು ಸಹ **2** ಮತ್ತು **3** ನೇ ಆರೋಪಿಗಳಿಗೆ ಯಾವುದೇ ಪ್ರತ್ಯೇಕ ಅಥವಾ ಜವಾಬ್ದಾರಿ ಇಲ್ಲ ಎಂದರೆ ಸರಿ. ನಾನು ಮತ್ತು ಪ್ರಾಸಾ **5** ರವರು ಕಾರ್ಯದರ್ಶಿ ಹಾಗೂ ಖಜಾಂಚಿ ಸ್ಥಾನಗಳನ್ನು ಉಳಿಸಿಕೊಂಡಿರುತ್ತೇವೆ ಎಂದರೆ ಸರಿ. **2002** ರಲ್ಲಿ ಒಟ್ಟು **6** ಮಾಸಿಕ ಸಭೆಗಳನ್ನು ಮಾಡಲಾಗಿದೆ. **6** ಸಭೆಗಳಲ್ಲಿ ವಿಷಯ ಪ್ರಸ್ತಾವನೆಯನ್ನು ಮಂಡಿಸಿ ಸಭೆ ನಡೆಸಿರುವುದು ನಾನೇ ಎಂದರೆ ಸರಿ. ಸದರಿ ಸಭೆಗಳಲ್ಲಿ ಟ್ರಸ್ಟ್‌ನ ಬೆಳವಣಿಗೆಗಳನ್ನು ಹೊರತು ಪಡಿಸಿ ಬೇರೆ ಯಾವುದೇ ವಿಚಾರಗಳ ಬಗ್ಗೆ ಮಾತನಾಡಿರುವುದಿಲ್ಲ. **2001** ರಿಂದ **2002** ರವರೆಗೆ ಯಾವ ಯಾವ ಧರ್ಮದರ್ಶಿಗಳು ಎಷ್ಟು ಹಣ ದೇಣಿಗೆ ನೀಡಿದ್ದಾರೆ ಎಂಬ ಬಗ್ಗೆ ಚರ್ಚೆ ಮಾಡಿರುತ್ತೇವೆ ಎಂದರೆ ಸರಿ. ಡಿಸೆಂಬರ್ **2006** ರವರೆಗೆ ಆಗಾಗ ದೇಣಿಗೆ ನೀಡಿರುವ ವಿಷಯವನ್ನು ಮಾಸಿಕ ಸಭೆಯಲ್ಲಿ ಚರ್ಚೆ ಮಾಡಿರುತ್ತಾರೆ. ಚರ್ಚೆ ವಿಷಯವನ್ನು ನಡಾವಳಿ ಪುಸ್ತಕದಲ್ಲಿ ನಾನೇ ನಮೂದು ಮಾಡುತ್ತಿದ್ದೆ ಎಂದರೆ ಸರಿ. ಪ್ರತಿ ಸಭೆಯಲ್ಲೂ ಲೆಕ್ಕ ಪತ್ರಗಳನ್ನು ನೀಡುವಂತೆ ನಾವು ಕೇಳುತ್ತಿದ್ದೆವು. ಹಾಜರಾದ ಧರ್ಮದರ್ಶಿಗಳಿಗೆ ಉತ್ತರಿಸುವಂತಹ ಜವಾಬ್ದಾರಿ **1** ನೇ ಆರೋಪಿಯೊಂದಿಗೆ ನನಗೂ ಮತ್ತು ಪ್ರಾಸಾ **5** ರವರಿಗೂ ಇತ್ತು ಎಂದರೆ ಸರಿ. ಲೆಕ್ಕ ಪತ್ರಗಳನ್ನು ಹಾಜರುಪಡಿಸುವಂತೆ ಚರ್ಚಾ ವಿಷಯವನ್ನಾಗಿ ನಡಾವಳಿ ಪುಸ್ತಕದಲ್ಲಿ ನಮೂದಿಸಲಾಗಿದೆ. ಈ ಪ್ರಕರಣದಲ್ಲಿ ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಈ ಪ್ರಕರಣದಲ್ಲಿ ದುರುಪಯೋಗವಾಗಿದೆ ಎಂದು ಹೇಳಲಾಗುವ ಹಣದ ಬಗ್ಗೆ ಉಳಿದ ಧರ್ಮದರ್ಶಿಗಳಿಂದ ಕೇಳಿ ತಿಳಿದುಕೊಂಡಿರುತ್ತೇನೆ . ನಿಪಿ **13** ನ್ನು ಯಾವ ಧರ್ಮದರ್ಶಿಗಳು ಯಾವ ಸಂದರ್ಭದಲ್ಲಿ ಯಾರಿಂದ ಮಾಡಿಸಿದ್ದಾರೆ

ಎಂದು ಹೇಳಲು ನನಗೆ ಬರುವುದಿಲ್ಲ. ನಮ್ಮ ಟ್ರಸ್ಟಗೆ ಸಂಬಂಧಿಸಿದಂತೆ ಬ್ಯಾಂಕಿನಲ್ಲಿ ವ್ಯವಹಾರವನ್ನು ಅಧ್ಯಕ್ಷರೊಂದಿಗೆ ನಾನು ಮತ್ತು ಪ್ರಾಸಾ **5** ರವರು ವ್ಯವಹಾರ ಮಾಡಲು ಟ್ರಸ್ಟನವತಿಯಿಂದ ನಿರ್ದೇಶನ ನೀಡಲಾಗಿರುತ್ತದೆ. ಅಧ್ಯಕ್ಷರೊಂದಿಗೆ ಖಜಾಂಚಿ ಅಥವಾ ಕಾರ್ಯದರ್ಶಿಗಳು ಸಹಿ ಮಾಡಿದರೆ ಮಾತ್ರ ಬ್ಯಾಂಕ್ ವ್ಯವಹಾರಗಳನ್ನು ಮಾಡಬೇಕು ಎಂದರೆ ಸರಿ . ನನ್ನ ಅಧಿಕಾರದ ಅವಧಿಯಲ್ಲಿ ದೊಡ್ಡ ಮೊತ್ತದ ಹಣವನ್ನು **1** ನೇ ಆರೋಪಿ ತನ್ನ ಖಾತೆಗೆ ಹಾಗೂ **2** ಮತ್ತು **3** ನೇ ಆರೋಪಿಗಳ ಖಾತೆಗೆ ನೀಡಿರುವ ಬಗ್ಗೆ ನನ್ನ ಗಮನಕ್ಕೆ ಬಂದಿರುವುದಿಲ್ಲ. ಧರ್ಮದರ್ಶಿಗಳು ಕೆಲವು ಹಣವನ್ನು ಕೈಗೆ ನೀಡಿದ್ದು ಕೆಲವು ಹಣವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಿರುತ್ತಾರೆ .

ಯಾವ ಯಾವ ಧರ್ಮದರ್ಶಿಗಳು ಯಾವ ಯಾವ ಕಾಲಕ್ಕೆ ಎಷ್ಟು ಮೊತ್ತದ ಹಣವನ್ನು ದೇಣಿಗೆಯಾಗಿ ನೀಡಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಪ್ರತಿ ಧರ್ಮದರ್ಶಿಗಳು ದೇಣಿಗೆಯಾಗಿ ನೀಡಿರುವ ಹಣವನ್ನು ನಡಾವಳಿ ಪುಸ್ತಕದಲ್ಲಿ ನಮೂದಿಸಿಲ್ಲ. ನಾನು ಟ್ರಸ್ಟಗೆ ರೂ **3,40,000/-** ಹಣವನ್ನು ದೇಣಿಗೆಯಾಗಿ ನೀಡಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಾನು **2006** ರವರೆಗೆ ಪ್ರಾಂಶುಪಾಲರಾಗಿ ಹಾಗೂ ವಸತಿ ನಿಲಯದ ಮೇಲ್ವಿಚಾರಕನಾಗಿ ಕರ್ತವ್ಯ ನಿರ್ವಹಿಸಿರುವ ಬಗ್ಗೆ ಮಾಸಿಕ ವೇತವನ್ನು ಪಡೆದಿರುತ್ತೇನೆ. **2001** ರಿಂದ **2006** ರವರೆಗೆ ವರಮಾನ ತೆರಿಗೆ ಇಲಾಖೆಯಿಂದ ಯಾವುದಾದರು ನೋಟಿಸು ಬಂದಿರುವ ಬಗ್ಗೆ ನನಗೆ ಮಾಹಿತಿ ಇಲ್ಲ.

ಮೊದಲ ಬಾರಿಗೆ ಹಣ ದುರುಪಯೋಗವಾಗಿದೆ ಎಂಬ ಬಗ್ಗೆ ನನಗೆ **2007** ರಲ್ಲಿ ತಿಳಿದು ಬಂದಿರುತ್ತದೆ. **2007** ಮಾರ್ಚ್ ನಲ್ಲಿ ಆರೋಪಿಗಳು ಯಾವುದೇ ಹುದ್ದೆಯಲ್ಲಿ ಇರಲಿಲ್ಲ ಎಂದರೆ ಸರಿ . **2007** ರಲ್ಲಿ ಪ್ರಾಸಾ **5**

ರವರ ಅಧ್ಯಕ್ಷರ ಅವಧಿಯಲ್ಲಿ ನಾನು ಖಜಾಂಚಿಯಾಗಿದ್ದೆ ಎಂದರೆ ಸರಿ. ನಿಡಿ **5** ರ ಬಗ್ಗೆ ನನಗೆ ತಿಳುವಳಿಕೆ ಇದೆ . ನಿಡಿ **5** ರಲ್ಲಿ ತೋರಿಸಿರುವಂತಹ ದೇಣಿಗೆ ಯಾರು ನೀಡಿದ್ದಾರೆ ಎಂದು ಹೇಳಲು ನನಗೆ ಗೊತ್ತಿಲ್ಲ. ನಿಡಿ **5** ರಲ್ಲಿ ಕಟ್ಟಡ ಕಾಮಗಾರಿಗೆ ವಿನಿಯೋಗಿಸಿರುವ ಹಣದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. **2006** ರ ನಂತರ ಯಾವುದೇ ಕಟ್ಟಡ ಕಾಮಗಾರಿ ಆಗಿರುವುದಿಲ್ಲ. **2007** ರಲ್ಲಿ ಹಿಂದಿನ ಆಡಳಿತ ಅವಧಿಗೆ ಸಂಬಂಧಿಸಿದಂತೆ ಯಾವುದಾದರೂ ಹಣ ದುರುಪಯೋಗವಾಗಿದೆ ಎಂದು ತಿಳಿದುಕೊಳ್ಳಲು ಲೆಕ್ಕ ಪರಿಶೋಧನೆಯನ್ನು ಮಾಡಿಸಿರುತ್ತೇವೆ . ನಾನು ಹೇಳುವಂತಹ ವರದಿ ನಿಡಿ **5** ಆಗಿರುತ್ತದೆ . ನಿಡಿ **5** ದಾಖಲೆಯನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ . ನಿಡಿ **5** ದಾಖಲೆಯನ್ನು ಚಾಸಾ **16** ರವರ ಬಳಿ ಮಾಡಿಸಿದ್ದೇವೆ ಎಂದರೆ ಸರಿ. ಸಂಸ್ಥೆಯ ಆದಾಯ ಮತ್ತು ಖರ್ಚಿನ ಬಾಬ್ತು ಲೆಕ್ಕ ಪತ್ರಗಳನ್ನು ಕೊಡದೆ ವರದಿಯನ್ನು ತಯಾರಿಸಲು ಸಾಧ್ಯವಿಲ್ಲ ಎಂದರೆ ಸರಿ . **2002** ರಿಂದ **2005** ರವರೆಗಿನ ಎಲ್ಲಾ ಲೆಕ್ಕ ಪರಿಶೋಧನ ವರದಿಯನ್ನು ಚಾಸಾ **16** ರವರೇ ಮಾಡಿರುತ್ತಾರೆ ಎಂದರೆ ಸರಿ. ನಿಡಿ **4** ನ್ನು ವಯಕ್ತಿಕವಾಗಿ ನಾನು ತಯಾರಿಸಿರುವ ವರದಿಯಾಗಿರುತ್ತದೆ. ನಿಡಿ **4** ನ್ನು ಬಹುತೇಕ ಪ್ರಾಸಾ **5** ರವರೇ ತಯಾರು ಮಾಡಿದಂತಹ ವರದಿಯಾಗಿರುತ್ತದೆ . ನಿಡಿ **4** ನ್ನು ಆದಾಯ ಮತ್ತು ಲೆಕ್ಕ ಪತ್ರಗಳ ಬಾಬ್ತನ್ನು ಪರಿಶೀಲಿಸಿ ತಯಾರಿಸಲಾಗಿರುತ್ತದೆ. ದಿ **31-03-2006** ರಲ್ಲಿ **1** ನೇ ಆರೋಪಿಯೇ ಅಧ್ಯಕ್ಷರಾಗಿದ್ದರು . ನಿಡಿ **4** ನ್ನು ವರದಿ ಮಾಡುವ ಸಮಯಕ್ಕೆ ಬ್ಯಾಂಕಿನ ಖಾತೆಯಲ್ಲಿ ಅಂದಾಜು ರೂ **15** ಲಕ್ಷ ಹಣ ಇತ್ತು. ನಿಡಿ **1** ರಿಂದ **4** ರಲ್ಲಿ ಎಲ್ಲಾ ಬ್ಯಾಂಕುಗಳಲ್ಲಿ **2006** ರವರೆಗೆ ಪಡೆದಂತಹ ಬ್ಯಾಂಕ್ ಸಾಲದ ವಿವರಗಳನ್ನು ತೋರಿಸಲಾಗಿದೆ . ಅದೇ ರೀತಿ ಬ್ಯಾಂಕಿಗೆ ಮರುಪಾವತಿ ಮಾಡಿದ ಬಗ್ಗೆಯು ಉಲ್ಲೇಖವಿದೆ .

**2006** ರವರೆಗೆ ಸಾಲ ಮರುಪಾವತಿ ಮಾಡುವ ಬಗ್ಗೆ ಬ್ಯಾಂಕಿನಿಂದ ಯಾವುದೇ ನೋಟಿಸು ಬಂದಿರುವುದಿಲ್ಲ ಎಂದರೆ ಸರಿ. ಈ ಸಾಲಗಳನ್ನು ಟ್ರಸ್ಟನ ಜಾಗ ಮತ್ತು ಕಟ್ಟಡವನ್ನು ಅಡಮಾನ ಮಾಡಿ ಸಾಲ ಪಡೆದಿರುವುದು ಎಂದರೆ ಸರಿ. **2007** ರಲ್ಲಿ ಕಾರ್ಪರೇಷನ್ ಬ್ಯಾಂಕಿನಿಂದ ಟ್ರಸ್ಟನ ಆಸ್ತಿಗಳನ್ನು ಸಾಲ ಮರುಪಾವತಿ ಮಾಡಿಲ್ಲ ಎಂಬ ಕಾರಣಕ್ಕೆ ಜಪ್ತಿ ಮಾಡಲು ನೋಟಿಸು ಬಂದಿತ್ತು ಎಂದರೆ ಸರಿ. ಆ ಸಮಯದಲ್ಲಿ ರಾಮು ದೇವಯ್ಯ ಎಂಬುವವರನ್ನು ಧರ್ಮದರ್ಶಿಗಳನ್ನಾಗಿ ಸೇರಿಸಿಕೊಂಡು ಅವರಿಂದ ದೇಣಿಗೆ ಪಡೆದು ಹಾಗೂ ಕೈ ಸಾಲ ಮಾಡಿ ಆ ಸಾಲವನ್ನು ತೀರಿಸಲಾಯಿತು. ನಿಡಿ **4** ನ್ನು ತಯಾರು ಮಾಡುವ ಸಮಯದಲ್ಲಿ ಮಾರ್ಚ್ **2005** ರವರೆಗೆ ಹಣ ದುರುಪಯೋಗವಾದ ಬಗ್ಗೆ ನನ್ನ ಗಮನಕ್ಕೆ ಬಂದಿರುತ್ತದೆ. ಆ ಬಗ್ಗೆ ನನಗೆ ಸರಿಯಾದ ಮಾಹಿತಿ ಇಲ್ಲ. ನಿಡಿ **4** ಮತ್ತು **5** ರಲ್ಲಿ ಹಣ ದುರುಪಯೋಗವಾದ ಬಗ್ಗೆ ಸಂಸ್ಥೆಯ ಹಿತದೃಷ್ಟಿಯಿಂದ ತೋರಿಸಿರುವುದಿಲ್ಲ. ಸಂಸ್ಥೆಯ ಹಿತದೃಷ್ಟಿಗೆ ಧಕ್ಕೆಯಾದಲ್ಲಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ತಿಳುವಳಿಕೆ ನನಗೆ ಇದೆ. **2007** ರಲ್ಲಿ ಹಣ ದುರುಪಯೋಗವಾಗಿದೆ ಎಂದು ಅರೋಪಿಗಳ ವಿರುದ್ಧ ದೂರನ್ನು ನೀಡಿದ್ದರು. ಸದರಿ ಪ್ರಕರಣ ಏನಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ರೂ **77,40,415/-** ಹಣ ದುರುಪಯೋಗ ವಾಗಿರುವ ಬಗ್ಗೆ ನಿಡಿ **5** ನ್ನು ತಯಾರು ಮಾಡುವ ಸಂದರ್ಭದಲ್ಲಿ ನನ್ನ ತಿಳುವಳಿಕೆಯಲ್ಲಿತ್ತು .

CC No. 1157/10
PW-6

ಮುಂದುವರಿದ ಪಾಟಿ ಸವಾಲನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ